ಮಾಡುವವರಿಗೆ ಈ ಫ್ಲಿಪ್ ಫ್ಲಾಪ್ ಚಪ್ಪಲಿಗಳು ಹೆಚ್ಚು ಸೂಕ್ತವಾಗಿರುತ್ತದೆ. ಇದರ ಗ್ರಿಪ್ ಕೂಡ ಚೆನ್ನಾಗಿರುತ್ತದೆ ಹಾಗೇ ಕಂಫರ್ಟ್ ಆಗಿರುತ್ತದೆ.

ಸ್ಟೈಲಿಶ್ ಲುಕ್ ಬೇಕೆನ್ನುವವರಿಗೂ ಕೂಡ ಇದರಲ್ಲಿ ನಾನಾ ವಿನ್ಯಾಸದ ಫ್ಲಿಪ್ ಫ್ಲಾಪ್ ಸಿಗಲಿದೆ. ಇದು ವಾಟರ್ ಪ್ರೂಫ್, ಲಾಂಗ್ ಲಾಸ್ಟಿಂಗ್ ಹಾಗೇ ವಿವಿಧ ಬಣ್ಣಗಳಲ್ಲಿ ಲಭ್ಯವಿದೆ. ರೆಗ್ಯುಲರ್ ಸೈಜ್ ಫಿಟ್‌ನ ಈ ಫ್ಲಿಪ್ ಫ್ಲಾಪ್ ಚಪ್ಪಲಿಗಳನ್ನು ಉತ್ತಮ ಗುಣಮಟ್ಟದ ಸಿಂಥೆಟಿಕ್ ಪ್ಲಾಸ್ಟಿಕ್ ಪಾಲಿಮರ್‌ನಿಂದ ತಯಾರಿಸಲಾಗುತ್ತದೆ. ಇದು ತುಂಬಾ ಮೃದುವಾಗಿರುವುದರಿಂದ ನಿಮ್ಮ ಪಾದಗಳಿಗೂ ಹೆಚ್ಚು ಆರಾಮದಾಯಕವೆನಿಸುತ್ತದೆ. ಆ್ಯಂಟಿ ಸ್ಲಿಪ್ ಸೋಲ್ ಇರುವುದರಿಂದ ಜಾರುವ ಸಂಭವ ಕಡಿಮೆ. ಇದು ಹೆಚ್ಚು ಭಾರವಿಲ್ಲದೇ ಇರುವುದರಿಂದ ಪಾದಕ್ಕೂ ನೋವಾಗುವುದಿಲ್ಲ ಹಾಗೂ ದಿನನಿತ್ಯದ ಉಪಯೋಗಕ್ಕೆ ಹೆಚ್ಚು ಸೂಕ್ತವಾಗಿರುತ್ತದೆ. ಈ ಫ್ಲಿಪ್ ಫ್ಲಾಪ್‌ನ ಮೇಲಿನ ಭಾಗವನ್ನು ವೆಲ್ ವೆಟ್ ಮೇಟಿರಿಯಲ್ ನಿಂದ ತಯಾರಿಸಲಾಗುತ್ತದೆ. ಕೆಳಗಡೆ ಮೆತ್ತಗಿನ ಕುಶನ್ ಮಾದರಿ ಇರುವುದರಿಂದ ಇದು ನಿಮ್ಮ ಔಟ್ ಫಿಟ್‌ಗೆ ಹೆಚ್ಚು ಹೊಂದಿಕೆಯಾಗುತ್ತದೆ. ಇದರಲ್ಲಿ ವೈಡ್ ಥಾಂಗ್ ಸ್ಯಾಂಡಲ್ಸ್, ಬೇಬಿ ಪಿಂಕ್ ಬಣ್ಣದ ಲಾ ಗರ್ಲ್ ಪ್ಲ್ಯಾಟ್ ಫಾರ್ಮ್ ಫ್ಲಿಪ್ ಫ್ಲಾಪ್ ಗಳು ಹೆಚ್ಚು ಸ್ಟೈಲಿಶ್ ನೋಟ ನೀಡುತ್ತದೆ.

### ಹೀಲ್ಡ್ ಲೂಫರ್ಸ್

ಇನ್ನು ಸ್ಟೈಲಿಶ್ ಲುಕ್ ನೀಡುವ ಈ ಹೀಲ್ಡ್ ಲೂಫರ್ಸ್‌ಗಳು ಪಾರ್ಟಿವೇರ್‌ಗೆ ಹೇಳಿಮಾಡಿಸಿರುವಂತದ್ದು. ಹಾಗೇ ಸ್ಲಿಂಗ್ ಬ್ಯಾಕ್ ಲೂಫರ್ಸ್ ಕೂಡ ಎಲ್ಲಾ ಔಟ್ ಫಿಟ್‌ಗೂ ಹೊಂದಿಕೆಯಾಗುತ್ತದೆ. ಇದರ ಜತೆಗೆ ಸ್ಟ್ರಾಪಿ ಹೀಲ್ಸ್ ಅಂತೂ ಎಲ್ಲರ ಕಣ್ಮನ ಸೆಳೆಯುವುದರಲ್ಲಿ ಅನುಮಾನವೇ ಇಲ್ಲ. ಇದರ ಲೇಸ್ ಅನ್ನು ನಿಮ್ಮ ಕಾಲಿನ ಮೇಲ್ಭಾಗದವರೆಗೂ ಹಾಕಿಕೊಳ್ಳಬಹುದು ಅಥವಾ ಆ್ಯಂಕಲ್‌ವರೆಗೂ ಹಾಕಿಕೊಳ್ಳಬಹುದು. ಇದು ಪಾರ್ಟಿ, ಫಂಕ್ಷನ್‌ಗಳಿಗೂ ಹೆಚ್ಚು ಸೂಕ್ತವಾಗಿದೆ.

### ಮಿಡ್ -ಹೀಲ್ ಲೂಫರ್ಸ್

ಗೋಲ್ಡ್ ಹಾರ್ಡ್‌ವೇರ್ ಹಾಗೂ ಚೈನ್ ವಿನ್ಯಾಸ್ ವಿರುವ ಈ ನ್ಯೂಟ್ರಲ್ ಲೂಫರ್ಸ್ ಕೂಡ ತುಂಬಾ ವಿಶೇಷವಾಗಿದೆ. ಇದು ಕೂಡ ನಿಮ್ಮ ಪಾದದ ಸೊಬಗನ್ನು ಹೆಚ್ಚಿಸುತ್ತದೆ.



### ಕ್ರಾಸ್ ಮ್ಯೂಲ್ಸ್

ಈ ಕ್ರಾಸ್ ಮ್ಯೂಲ್ಸ್ ಕೂಡ ನೋಡುವುದಕ್ಕೆ ಸರಳವಾಗಿದ್ದರೂ ಫ್ಯಾಷನ್‌ನಲ್ಲಿ ಹಿಂದೆ ಬಿದ್ದಿಲ್ಲ. ಇದರ ವಿನ್ಯಾಸ ಕೂಡ ಎಲ್ಲರ ಮನಸ್ಸು ಸೆಳೆಯುತ್ತದೆ. ಇದರಲ್ಲಿ ಲೇಸ್ ಇಲ್ಲದಿದ್ದರೂ ಸಾಕಷ್ಟು ಸ್ಟ್ರಾಪಿ ವಿನ್ಯಾಸವಿದೆ. ಇದು ಕೂಡ ನಿಮ್ಮ ಔಟ್‌ಫಿಟ್‌ಗೆ ಹೆಚ್ಚು ಹೊಂದಿಕೆಯಾಗುತ್ತದೆ.

### ಕ್ಲಾಗ್ಸ್

ಇದು ಚಳಿಗಾಲ ಹಾಗೂ ಬೇಸಿಗೆ ಕಾಲಕ್ಕೆ ಹೇಳಿಮಾಡಿಸಿರುವಂತದ್ದು.ಜತೆಗೆ ಇದು ಪಾದಕ್ಕೂ ಆರಾಮದಾಯಕವಾಗಿರುತ್ತದೆ. ಇದರಲ್ಲೂ ಹೀಲ್ಡ್ ಕ್ಲಾಗ್ಸ್ ಇವೆ. ಇದು ಔಟ್ ಫಿಟ್ ಗೆ ಚೆನ್ನಾಗಿ ಹೊಂದಿಕೆಯಾಗುತ್ತದೆ. ಇನ್ನು ನೇಯ್ಗೆಯಿಂದ ಮಾಡಲ್ಪಟ್ಟ ಕ್ಲಾಗ್ ಕೂಡ ಲಭ್ಯವಿದ್ದು ಇದು ಇನ್ನುಷ್ಟು ನಿಮಗೆ ಲುಕ್ ನೀಡುತ್ತದೆ.

### ಸ್ಪೋರ್ಟಿ ಸ್ಯಾಂಡಲ್ಸ್

ಇದು ಫ್ಯಾಷನ್ ಹಾಗೂ ಫಂಕ್ಷನ್ ಗಳಿಗೆ ತುಂಬಾನೇ ಚೆನ್ನಾಗಿರುತ್ತದೆ. ಈ ಲಗ್‌ಸೋಲ್ ಪಾದರಕ್ಷೆಯು ಧರಿಸುವುದಕ್ಕೂ ಕೂಡ ಆರಾಮದಾಯಕವಾಗಿರುತ್ತದೆ.

### ಸ್ನೀಕ್ಸ್

ಇದರಲ್ಲಿ ರೆಟ್ರೋ ರನ್ನರ್ ಸ್ನಿಕರ್ಸ್, ಕ್ಲ್ಯಾಸಿಕ್ ಲೆದರ್ ಸ್ನಿಕರ್ ಗಳು ನಿಮ್ಮನ್ನು ಸ್ಟೈಲಿಶ್ ಆಗಿ ಕಾಣುವಂತೆ ಮಾಡುತ್ತದೆ.

### ಕಿಟನ್ ಹೀಲ್ಸ್

ಹೀಲ್ಸ್ ಇಷ್ಟಪಡುವವರಿಗೆ ಈ ಕಿಟನ್ ಹೀಲ್ಸ್ ಚಪ್ಪಲಿ ಇಷ್ಟವಾಗದೇ ಇರದು! ಇದರಲ್ಲಿ ನಿಟ್ಟೆಡ್ ಕಿಟನ್ ಹೀಲ್ಸ್ ಮ್ಯೂಲ್ಸ್ ಕೂಡ ಲಭ್ಯವಿದ್ದು ಫ್ಯಾಷನ್ ಪ್ರಿಯರ ಮನಸ್ಸನ್ನು ಸೆಳೆಯುವುದರಲ್ಲಿ ಎರಡು ಮಾತಿಲ್ಲ.

### ಲಗ್‌ಸೋಲ್ ಬೂಟ್ಸ್

ಇನ್ನು ಬೂಟ್ಸ್ ಇಷ್ಟಪಡುವಂತಹ ಫ್ಯಾಷನ್ ಪ್ರಿಯರಿಗೆ ಇದು ಹೇಳಿಮಾಡಿಸಿದ್ದು. ನೈಟ್ ಪಾರ್ಟಿಗಳಿಗೆ ಈ ಶೂ ಹೆಚ್ಚು ಸೂಕ್ತವಾಗಿರುತ್ತದೆ.

### ಸ್ಲೈಡ್ ಸ್ಯಾಂಡಲ್

ಪಾದಕ್ಕೆ ಹೆಚ್ಚು ಹಿತನೀಡುವ ಈ ಸ್ಲೈಡ್ಸ್ ಗಳು ತುಂಬಾನೇ ಮೃದುವಾಗಿರುತ್ತದೆ. ಧರಿಸುವುದಕ್ಕೂ ಹೆಚ್ಚು ಆರಾಮದಾಯಕವಾಗಿರುತ್ತದೆ.ಇದನ್ನು ನೀವು ಮನೆಯ ಒಳಗಡೆ ಅಲ್ಲದೆ ಹೊರಗಡೆ ಕೂಡ ಹಾಕಿಕೊಂಡು ಹೋಗಬಹುದು.


## ನೀರಿನೊಳಗಿನ ಮಂಜು

**ಹೊಸ ಧಾರಾವಾಹಿ**
**ಮುಂದಿನವಾರ ಆರಂಭ**

ಗಂಡು ಹೆಣ್ಣಿನ ಸಂಬಂಧದ ಹಲವು ನಮೂನೆಗಳನ್ನು ಮತ್ತು ಆ ಸಂಬಂಧದ ಸೂಕ್ಷ್ಮಗಳ ವಿಶಿಷ್ಟ ಕಥನ. ಸಂಬಂಧಗಳು ಸಮಸ್ಯಾತ್ಮಕ ಆಗುವುದು ಹೇಗೆ ಮತ್ತು ಏಕೆ ಎನ್ನುವುದರ ಚಿಕಿತ್ಸಕ ವಿಶ್ಲೇಷಣೆ. ಲೈಂಗಿಕ ಅಜ್ಞಾನದಿಂದ ಸಂಸಾರಗಳಲ್ಲಿ ಉಂಟಾಗುವ ಬಿರುಕಿನ ನಿರೂಪಣೆ. ಬಂಧುಗಳೇ ಮೋಸ ಮಾಡುವ ವ್ಯಾವಹಾರಿಕ ಪ್ರಪಂಚದ ಚಿತ್ರವತ್ತಾದ ಚಿತ್ರಣ. ಮಂಜು ನೀರಿನೊಳಗೋ? ನೀರಿನೊಳಗೆ ಮಂಜೋ?

ಹಿರಿಯ ಕಾದಂಬರಿಕಾರ
**ನಾ. ಮೊಗಸಾಲೆ**
ಅವರ ಹೊಸ ಕಾದಂಬರಿ ‘ನೀರಿನೊಳಗಿನ ಮಂಜು’ ಮುಂದಿನ ವಾರದಿಂದ ಧಾರಾವಾಹಿಯಾಗಿ ಆರಂಭ.